ಹರಿಹರನ ಸುಪ್ರಸಿದ್ಧ ರಗಳೆ ಮಲುಹಣ – ಮಲುಹಣೆಯರ ಪ್ರೇಮಕಥೆಯ ಕೆಲವು ಆರಂಭಿಕ ವಾಕ್ಯಗಳು ಹೀಗಿವೆ:

ಊರೂರ್ಗೆ ತೀವಿದ ತಟಾಕ ನಿಕರಂಗಳಿಂ
ಊರೂರ್ಗೆ ಕಿಕ್ಕಿರಿದು ಕೊಬ್ಬಿದ ಬನಂಗಳಿಂ
ವನದೊಳಗೆ ಸುಳಿವುತಿಹ ಕತ್ತುರಿ ಮಿಗಂಗಳಿಂ
ದೇವಮಾತೃಕ ನದಿ ಮಾತೃಕದ ಬೆಳೆಗಳಿಂ
ದೇವ ನದಿಯಂದದಿ ಪರಿಪರಿವ ನದಿಗಳಿಂ
ಎಸೆವ ಕಾಶ್ಮೀರ ದೇಶ ರಂಜಿಸುವುದಿಳೆಗೆ ।

ಹಂಪೆಯಲ್ಲಿ ಕೂತ ಹರಿಹರನಿಗೆ ಜಿಂಕೆಗಳ ಕರ್ನಾಟಕವು ಒಂದೇ, ದ್ರಾವಿಡ ದೇಶವು ಅವನದೇ. ಮೇಲೆ ಪದ್ಯದಲ್ಲಿ ಹೆಸರಿಸಿದ ಉತ್ತರ ಭಾರತದ ಕಸ್ತೂರಿ ಮೃಗಗಳ ಕಾಶ್ಮೀರವೂ ಅವನ ಕೈಯ್ಯಳತೆಯದೆ! ದೈವಾನುಭವಕ್ಕೆ, ಪ್ರಕೃತಿ ದರ್ಶನಕ್ಕೆ ವಿಶ್ವವೆಲ್ಲ ಒಂದೇ. ಸಮಸ್ತ ಜೀವಾನುಕಂಪಿಯಾದ ಹರಿಹರನ ಮಾರ್ಗವನ್ನೇ ನವೋದಯ ಕವಿಗಳು ಅನುಸರಿಸಿದ್ದಾರೆ. ಕುವೆಂಪು, ಕಾರಂತ, ಪುತಿನ ಅವರು ತಂತಮ್ಮ ಗ್ರಾಮಗಳಿಂದಲೇ ವಿಶ್ವದ ಕಡೆಗೆ ಚಲಿಸಿದಂತೆ ಹರಿಹರ ತಾನಿದ್ದ ತುಂಗಾತಟದಿಂದ ಕಾವೇರಿ, ಗಂಗಾ ನದಿ ಮೊದಲಾಗಿ ಕಾಶ್ಮೀರ, ಅಲ್ಲಿಂದಾಚೆಯ ಹಿಮಾಲಯವನ್ನು ತನ್ನ ಪ್ರತಿಭಾಚಕ್ಷುಗಳಿಂದ ಕಂಡಿದ್ದಾನೆ. 'ಸಾಕಾರದೊಳ್ ಭಕ್ತಿ ಸನ್ನಿಹಿತ, ನಿರಾಕಾರದೊಳ್ ವ್ಯೋಮಾತೀತ' ಎಂಬುದು ಅವನ ಪಾತ್ರಗಳು ಮಾತ್ರವಲ್ಲ, ಹರಿಹರನು ಕೂಡ. ಈ ಕವಿಯನ್ನು ಮತಧರ್ಮದಿಂದ ಬಿಡಿಸಿ ಅವನ ಉದಾರ ಆಶಯಗಳಿಂದಷ್ಟೇ ನೋಡುವುದಾದರೆ 'ನಮ್ಮದೇನು ಇಲ್ಲ, ಸುತ್ತಣ ಪ್ರಕೃತಿಯಲ್ಲಿ ಎಲ್ಲವೂ ಇದೆ, ಹಾಗಂದುಕೊಳ್ಳುವುದಾದರೆ ಎಲ್ಲರೂ ಬದುಕಲು ಅವಕಾಶವಿದೆ' ಎನ್ನುವಂತಿದೆ.

ಸಂಪತ್ತಿನ ಕ್ರೋಡೀಕರಣದ ಅಮಲು ಮತ್ತು ಅದರಿಂದೊದಗುವ ತಾತ್ಕಾಲಿಕ ಸಂತೋಷ, ಸಿರಿವಂತಿಕೆಯ ಅಹಂಕಾರದಲ್ಲಿ ಇದೀಗ 'ಅಣು' ಅಸ್ತ್ರಗಳ ದುರಂತವನ್ನು ತಂದುಕೊಳ್ಳುತ್ತಿರುವ ಈ ಜಗತ್ತಿಗೆ ಹರಿಹರನ ಸರಳ–ಸುಂದರ ಆಶಯಗಳು ವಿಶ್ವಮಾನ್ಯವಾಗುವಂತಿವೆ.

## ಕೃಷ್ಣಮೂರ್ತಿ ಹನೂರು

ಜಾನಪದ ತಜ್ಞ, ಕತೆಗಾರ, ಕಾದಂಬರಿಕಾರ ಕೃಷ್ಣಮೂರ್ತಿ ಹನೂರು ಮೈಸೂರು ವಿಶ್ವವಿದ್ಯಾಲಯದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ (ಚಾಮರಾಜ ನಗರ) ಸಂದರ್ಶಕ ಪ್ರಾಧ್ಯಾಪಕರು. 'ಕೇರಿಗೆ ಬಂದ ಹೋರಿ', 'ಕತ್ತಲಲ್ಲಿ ಕಂಡ ಮುಖ', 'ಕಳೆದ ಮಂಗಳವಾರ ಮುಸ್ಸಂಜೆ' ಎಂಬ ಕಥಾಸಂಕಲನಗಳನ್ನು, 'ಬಾರೋ ಗೀಜಗನೆ', 'ನಿಕ್ಷೇಪ', 'ಅಜ್ಞಾತನೊಬ್ಬನ ಆತ್ಮಚರಿತ್ರೆ', 'ಸಿದ್ಧಿಯ ಕೈ ಚಂದ್ರನತ್ತ' ಎಂಬ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಅವರ ಪಿಎಚ್.ಡಿ. ಮಹಾಪ್ರಬಂಧ 'ಮ್ಯಾಸ ಬೇಡರು' ಬುಡಕಟ್ಟು ಅಧ್ಯಯನದ ಪುಸ್ತಕ ಇಂಗ್ಲಿಷ್‌ಗೆ ಭಾಷಾಂತರಗೊಂಡಿದೆ. ಜಾನಪದಕ್ಕೆ ಸಂಬಂಧಿಸಿದ ಹಲವಾರು ಕೃತಿಗಳನ್ನು ಸಂಪಾದಿಸಿದ್ದಾರೆ. 'ಕಾಲುದಾರಿಯ ಕಥನಗಳು' ಅವರ ಜಾನಪದ ಕ್ಷೇತ್ರ ಕಾರ್ಯದ ಅನುಭವ ಕಥನವಾಗಿದೆ. ಅವರ ಕುಮಾರವ್ಯಾಸ ಭಾರತ ಸಂಗ್ರಹ, 'ಸರಸ ಸೌಗಂಧಿಕದ ಪರಿಮಳ' ಪುಸ್ತಕ ಅಹರ್ನಿಶಿ ಪ್ರಕಾಶನದಿಂದ, ಕಾದಂಬರಿ 'ಕಾಲಯಾತ್ರೆ' ಅಂಕಿತ ಪುಸ್ತಕದಿಂದ ಇತ್ತೀಚೆಗೆ ಪ್ರಕಟವಾಗಿವೆ.